# ಕ್ರಿಕೆಟ್ ಚೆಂಡಿಗೆ ಸ್ಮಾರ್ಟ್ ಟಚ್






ತಂತ್ರಜ್ಞಾನದ ಹಂಗಿಲ್ಲದ ಕ್ರಿಕೆಟ್ ಕಾಲವೊಂದಿತ್ತು. ಈಗ ತಂತ್ರಜ್ಞಾನವಿಲ್ಲದೇ ಕ್ರಿಕೆಟ್ ಇಲ್ಲ ಎನ್ನೋ ಕಾಲ ಬಂದಿದೆ. ಅಷ್ಟರಮಟ್ಟಿಗೆ ಈ ಕ್ರೀಡೆ ಹೈಟೆಕ್ ಆಗಿದೆ. ತಂತ್ರಜ್ಞಾನಕ್ಕೆ ತಾನು ಒಗ್ಗಿಕೊಂಡು ಪಾರದರ್ಶಕತೆ ಮೆರೆಯುತ್ತಿರುವ ಜಂಟಲ್‌ಮನ್ ಆಟ ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿದ್ದು, ಬೆಂಕಿ ಚೆಂಡಿನಂತೆ ದಾಂಡಿಗನತ್ತ ನುಗ್ಗಿ ಬರುವ ಚೆಂಡಿನಲ್ಲೂ ತಂತ್ರಜ್ಞಾನ ಅಳವಡಿಸಿಕೊಂಡಿದೆ.

ಹೌದು, ಕ್ರಿಕೆಟ್ ಬಾಲ್ ತಯಾರಿಕಾ ಕಂಪನಿಯಾದ ಕೊಕಬುರ್ರಾ (Kookaburra) ಹಾಗೂ ತಂತ್ರಜ್ಞಾನ ಸಂಶೋಧಕ ಕಂಪನಿಯಾದ ಸ್ಪೋರ್ಟ್‌ಕೊರ್ (SportCor), ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ 'ಸ್ಮಾರ್ಟ್ ಬಾಲ್' ಅನ್ನು ಕ್ರಿಕೆಟ್ ಲೋಕಕ್ಕೆ ಪರಿಚಯಿಸಿವೆ. ಈ ಚೆಂಡನ್ನು ಮುಂದಿನ ಬೇಸಿಗೆ ಸಮಯದಲ್ಲಿ ಕ್ರಿಕೆಟ್ ರಸದೌತಣ ಉಣಬಡಿಸಲಿರುವ 'ಆಸ್ಟ್ರೇಲಿಯನ್ ಬಿಗ್ ಬ್ಯಾಶ್ ಲೀಗ್'ನಲ್ಲಿ (ಆಸ್ಟ್ರೇಲಿಯನ್ ಟಿ–20 ಲೀಗ್) ಬಳಸುವ ಸಾಧ್ಯತೆ ದಟ್ಟವಾಗಿದೆ.

ಈ ಕಂಪನಿಗಳು ಜಂಟಿಯಾಗಿ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ಮೈಕ್ರೊಚಿಪ್ ಅಳವಡಿತ ಚೆಂಡನ್ನು ಸಿದ್ಧಪಡಿಸಿದ್ದು, ಅದನ್ನು ಈಗಾಗಲೇ ಕೆಲವು ಪರೀಕ್ಷೆಗಳಿಗೆ ಒಳಪಡಿಸಲಾಗಿದೆ. ಅಂತಿಮವಾಗಿ ಕ್ರಿಕೆಟ್ ಆಟದಲ್ಲಿ ಹೊಸ ಚೆಂಡನ್ನು ಬಳಸಲು ಇನ್ನೂ ಕೆಲವು ಪರೀಕ್ಷೆಗಳನ್ನು ನಡೆಸಬೇಕಿದ್ದು, ಆ ಪರೀಕ್ಷೆಗಳಲ್ಲಿ ಯಶಸ್ವಿಯಾದರೆ ಕ್ರಿಕೆಟ್‌ನಲ್ಲಿ 'ಸ್ಮಾರ್ಟ್ ಬಾಲ್'ನದ್ದೇ ಸದ್ದು.

ಈ ಚೆಂಡು ಕ್ರೀಡೆಯ ತರಬೇತಿಗೆ, ಆಟಕ್ಕೆ ಹಾಗೂ ಅನುಭವ ವಿಧಾನಕ್ಕೆ ಹೊಸ ಆಯಾಮ ತೆರೆದಿಡಲಿದೆ ಎನ್ನಲಾಗಿದೆ. ಆಸ್ಟ್ರೇಲಿಯಾದ ಕ್ರಿಕೆಟ್ ಕಾರ್ಯಾಚರಣೆಯ ಮುಖ್ಯಸ್ಥರಾದ ಪೀಟರ್ ರೋಚ್/ಚ್ ಈ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದು, 'ಸ್ಮಾರ್ಟ್‌ಬಾಲ್ ಮೇಲಿನ ನಿರೀಕ್ಷೆಗಳು ಸದ್ಯದ ಮಟ್ಟಿಗೆ ಅಪಾರ. ಈ ಬಾರಿಯ ಬಿಗ್ ಬ್ಯಾಶ್ ಲೀಗ್‌ನಲ್ಲಿ ಅದರ ಭವಿಷ್ಯ ನಿರ್ಧಾರವಾಗಲಿದೆ' ಎಂದಿದ್ದಾರೆ.

ವೇಗ, ಚಲನವಲನ ಹಾಗೂ ಶಕ್ತಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕ್ರಿಕೆಟ್ ಬಾಲ್ ಸಂಗ್ರಹ ಮಾಡುತ್ತದೆ ಎಂಬುದೇ ಅತ್ಯಂತ ರೋಮಾಂಚನಕಾರಿ ಆವಿಷ್ಕಾರ. ಈ ಆವಿಷ್ಕಾರವು ಆಟಗಾರರು, ಕೋಚ್‌ಗಳು ಹಾಗೂ ಕ್ರಿಕೆಟ್ ಪ್ರೇಮಿಗಳಿಗೆ ಪ್ರಯೋಜನಕಾರಿಯಾಗಲಿದೆ.

ಒಂದು ವೇಳೆ ಇದನ್ನು ನಮ್ಮ ಮುಂದೆ ಪ್ರಸ್ತುತ ಪಡಿಸಿದರೆ, ನಮ್ಮ ಸ್ಪರ್ಧೆಗಳು ಹಾಗೂ ಪಂದ್ಯಗಳಲ್ಲಿ ಅದನ್ನು ಪ್ರಯೋಗ ಮಾಡುವ ಸಾಧ್ಯತೆಗಳಿವೆ. ಈ ಚೆಂಡಿನ ಗುಣಲಕ್ಷಣಗಳು, ಅಂಗಳದಲ್ಲಿ ಹೇಗೆ ವರ್ತಿಸುತ್ತದೆ ಎಂಬುದನ್ನು ಪರಿಶೀಲಿಸುವುದು ಹಾಗೂ ಆಂತರಿಕ ಕಾರ್ಯವಿಧಾನಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿಯುವುದು ನಮ್ಮ ಜವಾಬ್ದಾರಿಯಾಗುತ್ತದೆ ಎಂದು ರೋಚ್ ಹೇಳಿದ್ದಾರೆ.

ಆಟದ ಮೌಲ್ಯ ಹಾಗೂ ವಿಶ್ವಾಸಾರ್ಹತೆ ಉಳಿಸಿಕೊಳ್ಳುವ ಸಲುವಾಗಿ ಪೂರಕ ತಂತ್ರಜ್ಞಾನಕ್ಕೆ ಕ್ರಿಕೆಟ್ ಒಗ್ಗಿಕೊಂಡಿದೆ. ಆಟವನ್ನು ಪ್ರಸ್ತುತಪಡಿಸಲಷ್ಟೇ ಅಲ್ಲದೆ ನಿರ್ಣಯ, ಅಧಿಕೃತತೆ ಹಾಗೂ ಆಟಗಾರರ ಕೌಶಲ್ಯವನ್ನು ಹೆಚ್ಚಿಸುವ ಸಲುವಾಗಿಯೂ ತಂತ್ರಜ್ಞಾನ ನೆರವಿಗೆ ಬಂದಿದೆ. ಅದರ ಪರಿಣಾಮವಾಗಿಯೇ ಅಲ್ಟ್ರಾ ಎಡ್ಜ್, ಹಾಕ್ ಐ, ಹಾಟ್‌ಸ್ಪಾಟ್, ಸ್ಟಂಪ್ ಮೈಕ್ರೊಫೋನ್ಸ್ ಹಾಗೂ ಬಾಲ್ ಟ್ರ್ಯಾಕಿಂಗ್ ತಂತ್ರಜ್ಞಾನಗಳನ್ನು ಪಂದ್ಯದ ಅವಿಭಾಜ್ಯ ಅಂಗವಾಗಿ ಎಲ್ಲ ಅಂತರರಾಷ್ಟ್ರೀಯ ಹಾಗೂ ಪ್ರಮುಖ ದೇಸಿ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಕಾಣಬಹುದು. ಇವೆಲ್ಲದರ ಮುಂದುವರೆದ ಭಾಗವಾಗಿ ಸ್ಮಾರ್ಟ್‌ಬಾಲ್ ರೂಪುಗೊಂಡಿದೆ.

ಕೊಕಬುರ್ರಾ ಹೇಳುವ ಪ್ರಕಾರ ಈ ಸ್ಮಾರ್ಟ್‌ಬಾಲ್ ಒಳಗಿನ ಪದರದಲ್ಲಿ ಮೈಕ್ರೊ ಚಿಪ್ ಇರುತ್ತದೆ. ಆ ಚಿಪ್‌ನಿಂದ ಆಟದ ವೇಳೆ ಫೀಡ್‌ಬ್ಯಾಕ್ ರವಾನೆಯಾಗುತ್ತದೆ. ಅದು ಆಟದ ಮೇಲೆ ಮಾತ್ರವಲ್ಲದೆ – ಕೋಚ್‌ಗಳ ತರಬೇತಿ ವಿಧಾನ, ಅಧಿಕೃತತೆ ಹಾಗೂ ಆಟದ ಅನುಭವದ ಹಾದಿಯಲ್ಲಿ ಗಮನಾರ್ಹವಾದ ಬದಲಾವಣೆ ತರಬಲ್ಲದು. ಈ ತಂತ್ರಜ್ಞಾನದ ಬಗ್ಗೆ ಕೊಕಬುರ್ರಾ ತನ್ನ ಟ್ವಿಟರ್ ಖಾತೆಯಲ್ಲಿ (Kookaburra Cricket) ವಿವರವಾದ ಮಾಹಿತಿಯನ್ನು ಪ್ರಕಟಿಸಿದೆ.

ಉದ್ದೇಶಿತ ಸ್ಮಾರ್ಟ್‌ಬಾಲ್ ಸಾಮಾನ್ಯ ಕ್ರಿಕೆಟ್ ಬಾಲ್‌ನಂತೆಯೇ ಅನುಭವ ನೀಡುತ್ತದೆ. ಆದರೆ, ಮಾಹಿತಿ ಸಂಗ್ರಹಿಸುವ ವಿಚಾರದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಚೆಂಡಿನ ಎಸೆತದ ವೇಗ, ಪ್ರೀ–ಬೌನ್ಸ್ (ಚೆಂಡು ಪುಟಿಯುವ ಮೊದಲಿನ) ವೇಗ ಮತ್ತು ಪೋಸ್ಟ್ ಬೌನ್ಸ್‌ನ (ಚೆಂಡು ಪುಟಿದ ನಂತರದ) ವೇಗದ ಅಂಕಿಅಂಶಗಳ ಮಾಹಿತಿಯನ್ನು ತ್ವರಿತವಾಗಿ ಮೈಕ್ರೊ ಚಿಪ್ ಮೂಲಕ ಸಂಗ್ರಹಿಸುತ್ತದೆ. ಅದನ್ನು ಅಷ್ಟೇ ತ್ವರಿತವಾಗಿ ನಿಯಂತ್ರಣ ವ್ಯವಸ್ಥೆಗೆ ರವಾನಿಸುತ್ತದೆ. ಸಾಮಾನ್ಯ ಕ್ರಿಕೆಟ್ ಬಾಲ್‌ನಲ್ಲಿ ಇದು ಅಸಾಧ್ಯ. ಚೆಂಡಿನ ಎಸೆತದ ಒಳನೋಟವನ್ನು ಹಿಂದೆಂದೂ ಅರಿಯದಷ್ಟು ಸನಿಹ, ನಿಖರತೆಯನ್ನು ತಿಳಿಯಬಹುದಾಗಿದೆ.

ಸ್ಮಾರ್ಟ್‌ಬಾಲ್‌ನಿಂದ ನೇರವಾಗಿ ಕಂಪ್ಯೂಟರ್, ಸ್ಮಾರ್ಟ್‌ಫೋನ್ ಹಾಗೂ ವಾಚ್‌ಗೆ ಮಾಹಿತಿಯನ್ನು ರವಾನಿಸಬಹುದು. ರವಾನೆಯಾಗುವ ದತ್ತಾಂಶದಿಂದ ಯಾವ ರೀತಿ ಬೌಲಿಂಗ್ ಮಾಡಬೇಕು ಎಂಬುದನ್ನು ತಿಳಿಯಲು ಬೌಲರ್‌ಗಳು ಮತ್ತು ಅಂಪೈರ್‌ಗಳಿಗೆ ಸಹಾಯವಾಗುತ್ತದೆ. ಜೊತೆಗೆ ಹೊಸ ಮಾಹಿತಿ ಹಾಗೂ ಚೆಂಡಿನ ವೇಗ, ಅದು ಸಾಗಿದ ಹಾದಿ, ಅದರ ವಿಶ್ಲೇಷಣೆ, ಡ್ರೈವ್‌ನ ಪ್ರಭಾವ ಇತ್ಯಾದಿಗಳಿಂದಾಗಿ ಪ್ರಸಾರದ ಗುಣಮಟ್ಟವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ವೀಕ್ಷಕರಿಗೆ ಕಟ್ಟಿಕೊಡಬಹುದಾಗಿದೆ. ಈ ತಂತ್ರಜ್ಞಾನದಿಂದ ಯುವ ಆಟಗಾರರಿಗೆ ಹಾಗೂ ಕೋಚ್‌ಗಳಿಗೆ ಅಕಾಡೆಮಿಯ ಮಟ್ಟದಲ್ಲಿ ಸಾಕಷ್ಟು ಅನುಕೂಲವಾಗುತ್ತದೆ.

■ **ಶಶಿಕುಮಾರ ಸಿ.**